ಹೋಗಲೆ, ಹೇಳಲೇ ಎಂದು ತಾವು ಅಂದುಬಿಟ್ಟರೆ, ನಮಗೆ ಎಷ್ಟು ಮನಸ್ಸಿಗೆ ನೋವಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರಿಗೆ, ಮಾನ್ಯ ವಾಟಾಳ್ ನಾಗರಾಜ್‌ರವರ ಮೇಲೆ ಇದ್ದಷ್ಟು ಪ್ರೀತಿ ಯಾರ ಮೇಲೂ ಇಲ್ಲ.

ಶ್ರೀ ಎಸ್.ಡಿ. ಜಯರಾಂ : ಮಾನ್ಯ ವಾಟಾಳ್‌ರವರು ಎತ್ತಿರತಕ್ಕಂಥ ಪ್ರಶ್ನೆ ಬಹಳ ಗಂಭೀರವಾದುದು. ಇದರ ಬಗ್ಗೆ ದೀರ್ಘವಾಗಿ ಚರ್ಚೆ ಮಾಡಿ ತಿಳಿಸುತ್ತೇನೆ ಎಂದು ನಾನಾದರೂ ಸದಸ್ಯರಿಗೆ ತಿಳಿಸಲಿಕ್ಕೆ ಇಚ್ಚಿಪಡುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಎಲ್ಲಾ ಸಂಪತ್ತಿಗೂ ಒಂದು ಮಿತಿಯಿರುತ್ತದೆ. ಖಾಸಗಿ ಸಂಪತ್ತಿಗೂ ಒಂದು ಮಿತಿಯಿರುತ್ತದೆ. ಗಣಿ ಸಂಪತ್ತಿಗೂ ಒಂದು ಮಿತಿಯಿರುತ್ತದೆ. ನಾವು ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟುತ್ತಿದ್ದೇವೆ, ಸೇತುವೆಗಳನ್ನು ಕಟ್ಟುತ್ತಿದ್ದೇವೆ. ಈಗ ಆ ಗ್ರಾನೈಟ್, ಈ ಗ್ರಾನೈಟ್ ಯಾವುದೂ ಉಳಿದುಕೊಂಡಿಲ್ಲ, ಎಲ್ಲವೂ ಹೋಗುತ್ತಿದೆ. ಅದೇನೇ ಹೋಗಲೀ, ಈ ಗ್ರಾನೈಟ್ ಫಾರ್ಮ್ ಆಗಬೇಕಾದರೆ ಎಷ್ಟು ಕೋಟಿ ವರ್ಷ ತೆಗೆದುಕೊಳ್ಳುತ್ತದೆ. ಈ ಕೋಲಾರದ ಗಣಿಗಳಿಗೆ ಎಷ್ಟು ವರ್ಷವಾಗಿದೆ ಅದು ಫಾರ್ಮ್ ಆಗುವುದಕ್ಕೆ ಎಷ್ಟು ವರ್ಷ ತೆಗೆದುಕೊಂಡಿದೆ? ಆ ಮಾಹಿತಿಗಳು ಏನಾದರೂ ಇದ್ದರೆ ಈ ಸಭೆಗೆ ದಯವಿಟ್ಟು ತಿಳಿಸಿ.

ಶ್ರೀ ಎಸ್.ಡಿ. ಜಯರಾಮ್ : ಅಧ್ಯಕ್ಷರೇ, ಮಾಹಿತಿ ಈಗ ಇಲ್ಲ, ಮುಂದಿನ ಸಲ ಮಾಹಿತಿಯನ್ನು ತಿಳಿಸುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಒಂದು ವಿಚಾರ ಸಭೆಯ ಗಮನಕ್ಕೆ ತರುತ್ತೇನೆ. ಲಾಲ್‌ಬಾಗ್‌ನಲ್ಲಿ ಇರುವ ಗ್ರಾನೈಟ್ ಫಾರ್ಮ್ ಆಗುವುದಕ್ಕೆ 4 ಕೋಟಿ ವರ್ಷವಾಗಿದೆ. ಈ ಗ್ರಾನೈಟ್ ಹತ್ತು ವರ್ಷದಲ್ಲಿ ಆಗುವಂಥದ್ದಲ್ಲ.

ರಾಜ್ಯದಲ್ಲಿನ ಸಣ್ಣ ಕೈಗಾರಿಕೆಗಳು

399 - ಶ್ರೀ ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು?

ಆ) ರಾಜ್ಯದಲ್ಲಿ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು?

ಇ) ರಾಜ್ಯದಲ್ಲಿ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳ ಮರು ಸ್ಥಾಪನೆಗೆ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮ ಏನು;

ಈ) 1994-95ನೇ ಸಾಲಿನ ಸಣ್ಣ ಕೈಗಾರಿಕೆ ಉದ್ಯಮಗಳಿಗೆ ನೀಡಬೇಕಾದಂತಹ ಸಹಾಯಧನವೆಷ್ಟು, ಹಾಗೂ ಈವರೆಗೆ ಎಷ್ಟು ಸಹಾಯಧನ ಸಣ್ಣ ಕೈಗಾರಿಕಾ ಉದ್ಯಮಗಳಿಗೆ ಕೊಡಬೇಕಾಗಿರುತ್ತದೆ?

ಶ್ರೀ ಎನ್.ಎಂ. ನಬಿ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

ಅ) ದಿನಾಂಕ 31-3-1985ಕ್ಕೆ ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ 1,63,524.

ಆ) ಭಾರತೀಯ ರಿಸರ್ವ್ ಬ್ಯಾಂಕಿನ ಮಾಹಿತಿಯ ಪ್ರಕಾರ ರಾಜ್ಯದಲ್ಲಿ 31-3-94ರ ಅಂತ್ಯಕ್ಕೆ ಒಟ್ಟು 13,950 ರೋಗಗ್ರಸ್ಥ ಕೈಗಾರಿಕೆಗಳಿವೆ.

ಇ) ರೋಗಗ್ರಸ್ಥ ಸಣ್ಣ ಕೈಗಾರಿಕೆಗಳ ಮರು ಸ್ಥಾಪನೆಗೆ ಈಗಾಗಲೇ 1988 ರಿಂದ ಸಮಿತಿಯೊಂದಿದ್ದು ಕಾರ್ಯ ನಿರ್ವಹಿಸುತ್ತಿದೆ. ಈ ಸಮಿತಿ ಇತ್ತೀಚಿನ ವರದಿಯಂತೆ

317 ಘಟಕಗಳಿಗೆ ಬೀಜಧನ ಸಹಾಯ ಮಂಜೂರಾತಿ ನೀಡಿದೆ. ಉತ್ತೇಜಕರ (ಪ್ರೊಮೋಟರ್ಸ್) ಶೇಕಡ 50ರ ಪಾಲಿಗೆ ಎದುರಾಗಿ ಬೀಜಧನ ಸಾಲದ ಮೊತ್ತ ರೂ. 50,000.00 ಮೀರದಂತೆ ನೀಡಲಾಗುತ್ತಿದೆ.

ಈ) 1994-95ನೇ ಸಾಲಿಗೆ ಸಣ್ಣ ಕೈಗಾರಿಕಾ ಉದ್ಯಮಗಳಿಗೆ ನೀಡಬೇಕಾದ ಸಹಾಯಧನ ರೂ. 68.12 ಕೋಟಿ. ಬಾಕಿ ನೀಡಬೇಕಾಗಿರುವ ಸಹಾಯಧನ ಮೊತ್ತ ರೂ. 33.12 ಕೋಟಿಗಳು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳು ಇರುವುದು ಎಷ್ಟು ಎಂದು ಕೇಳಿದ್ದಕ್ಕೆ 1,63,524 ಎಂದು ಹೇಳಿದ್ದಾರೆ. ರೋಗಗ್ರಸ್ಥ ಕೈಗಾರಿಕೆಗಳು ಎಷ್ಟು ಎಂದು ಕೇಳಿರುವುದಕ್ಕೆ 13,950 ಎಂದು ಹೇಳಿದ್ದಾರೆ. ರೋಗಗ್ರಸ್ಥ ಕೈಗಾರಿಕೆಗಳ ಮರು ಸ್ಥಾಪನೆಗಾಗಿ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿರುವುದಕ್ಕೆ ಕೇವಲ 317 ಘಟಕಗಳಿಗೆ ಬೀಜ ಧನ ಸಹಾಯವನ್ನು ಒದಗಿಸಿಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಅಂದರೆ 13950 ರೋಗಗ್ರಸ್ಥ ಕೈಗಾರಿಕೆಗಳು ಇರುವಂಥ ಈ ಸಂದರ್ಭದಲ್ಲಿ ಕೇವಲ 317 ಘಟಕಗಳಿಗೆ ಇವರು ಸಹಾಯ ಧನವನ್ನು ಮಾಡಿ ಮರುಸ್ಥಾಪನೆಗೆ ಅವಕಾಶ ಮಾಡಿಕೊಟ್ಟಿದ್ದರೆ ಇನ್ನು ಉಳಿದಂಥ ಸಣ್ಣ ಕೈಗಾರಿಕೆಗಳ ಕಥೆ ಏನು? ಇದರ ಜೊತೆಗೆ ಇಷ್ಟೊಂದು ಪ್ರಮಾಣದಲ್ಲಿ ಕೈಗಾರಿಕೆಗಳು ರೋಗಗ್ರಸ್ಥ ಆಗುತ್ತಿರುವುದಕ್ಕೆ ಕಾರಣ ಏನು? ಕೆ.ಇ.ಬಿ. ವಿದ್ಯುತ್‌ನ ಕೊರತೆಯಿಂದ ಏನಾದರೂ ರೋಗಗ್ರಸ್ಥವಾಗುತ್ತಿದೆಯೋ ಅಥವಾ ಇವಕ್ಕೆ ಬೇಕಾದಂಥ ಸಹಾಯಧನ ಸಮಯಕ್ಕೆ ಸರಿಯಾಗಿ ಸಿಗದೇ ಈ ಕೈಗಾರಿಕೆಗಳು ರೋಗಗ್ರಸ್ಥವಾಗುತ್ತಿವೆಯೋ ಅಥವಾ ಯಾವುದೇ ಒಂದು ಆರ್ಥಿಕ ನೆರವು ನೀಡುವಂಥ ಸಂಸ್ಥೆಗಳಿಂದ ಹಣ ದೊರಕಿಸಿಕೊಡುವುದರಲ್ಲಿ ವಿಳಂಬವಾಗಿ ಈ ಕೈಗಾರಿಕೆಗಳು ರೋಗಗ್ರಸ್ಥವಾಗುತ್ತಿವೆಯೋ ಎನ್ನುವುದರ ಬಗ್ಗೆ ಉತ್ತರ ನೀಡಬೇಕಾಗಿ ತಮ್ಮ ಮುಖಾಂತರ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎನ್.ಎಂ. ನಬಿ : ಸನ್ಮಾನ್ಯ ಸಭಾಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರ ಹೇಳುವುದಾದರೆ, ನಮ್ಮಲ್ಲಿ ರೋಗಗ್ರಸ್ಥ ಕೈಗಾರಿಕೆಗಳನ್ನು ಗುರುತಿಸುವುದಕ್ಕೆ ಈಗ ಸದ್ಯಕ್ಕೆ ನನ್ನಲ್ಲಿರತಕ್ಕಂಥದ್ದು ಆರ್.ಬಿ.ಐ.ನಿಂದ ಮಾಡಿರತಕ್ಕಂಥ ಸರ್ವೆ ಮೂಲಕ ನ ಗೊತ್ತಾಗಿರತಕ್ಕಂಥ ಸಂಖ್ಯೆಯನ್ನು ಅವರಿಗೆ ಕೊಟ್ಟಿದ್ದೇನೆ. ಇನ್ನು ನಾನು ಪ್ರಯಾಸದಲ್ಲಿದ್ದಾಗ ಹಾಗೂ ನಮ್ಮ ಕೈಗಾರಿಕಾ ಹಾಗೂ ವಾಣಿಜ್ಯ ಇಲಾಖೆಯವರಿಗೆ ಕೂಡ ಆಯಾ ಜಿಲ್ಲೆಯಲ್ಲಿ ರೋಗಗ್ರಸ್ಥ ಕೈಗಾರಿಕೆಗಳ ಬಗ್ಗೆ ತಾಲ್ಲೂಕು ಮಟ್ಟದಲ್ಲಿ ಇರತಕ್ಕಂಥ ಪ್ರಮೋಶನಲ್ ಅಧಿಕಾರಿಗಳಿಗೆ ಹೇಳಿ ಅಲ್ಲಿ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳು ಎಷ್ಟಿವೆ, ಒಟ್ಟಾರೆ ಸಣ್ಣ ಕೈಗಾರಿಕೆಗಳು ಎಷ್ಟಿವೆ ಮತ್ತು ರೋಗಗ್ರಸ್ಥ ಕೈಗಾರಿಕೆಗಳಾಗುವುದಕ್ಕೆ ಏನು ಕಾರಣಗಳು ಎಂಬ ಬಗ್ಗೆ ಮಾಹಿತಿಗಳನ್ನು ನನಗೆ ಒದಗಿಸಬೇಕು ಎಂದು ಹೇಳಿದ್ದೇನೆ. ಇನ್ನು ಸ್ವಲ್ಪ ದಿನಗಳಲ್ಲೇ ಆ ಮಾಹಿತಿಗಳು ನನಗೆ ಲಭ್ಯವಾಗುತ್ತಿವೆ. ಅದು ಬಂದನಂತರ ಈ ರೋಗಗ್ರಸ್ಥ ಕೈಗಾರಿಕೆಗಳು ಯಾವುವು ಇವೆ ಅವುಗಳಿಗೆ ಯಾವ ರೀತಿಯಲ್ಲಿ ಧನಸಹಾಯವನ್ನು ಮಾಡಿ ಪುನಶ್ಚೇತನಗೊಳಿಸುವುದಕ್ಕೆ ಏನು ಅನುಕೂಲ ಬೇಕೋ ಅದನ್ನೆಲ್ಲಾ ಸರ್ಕಾರ ಮಾಡುವುದಕ್ಕೆ ತೀರ್ಮಾನ ತೆಗೆದುಕೊಳ್ಳುತ್ತಿದೆ ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೇಳಿರುವಂಥ ಉತ್ತರದಿಂದ ನನಗೆ ಸಮಾಧಾನವಾಗಿಲ್ಲ. ಕಾರಣವೇನೆಂದರೆ, ಈ ರಾಜ್ಯದಲ್ಲಿ ಕೈಗಾರಿಕಾ ಉದಾರ ನೀತಿಯನ್ನು ಹಿಂದಿನ ಸರ್ಕಾರ ಘೋಷಣೆ

ಮಾಡಿರತಕ್ಕಂಥ ಸಂದರ್ಭದಲ್ಲಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ 'ಸಿಂಗಲ್ ವಿಂಡೋ ಏಜೆನ್ಸಿ' ಎಂದು ಹೇಳಿ ಸ್ಥಾಪನೆ ಮಾಡಿರುವಂಥದ್ದು. ಆ 'ಸಿಂಗಲ್ ವಿಂಡೋ ಏಜೆನ್ಸಿ'ಗೆ ಎಷ್ಟು ರೋಗಗ್ರಸ್ಥ ಕೈಗಾರಿಕೆಗಳು ಇವೆ ಆ ಕೈಗಾರಿಕೆಗಳವರು ಅರ್ಜಿಯನ್ನು ಹಾಕಿ ಬೇಕಾದಂಥ ಸಹಾಯವನ್ನು ಪಡೆಯುವುದರ ಬಗ್ಗೆ ಸರ್ಕಾರದವರು ನೇರವಾದ ಆದೇಶ ಹೊರಡಿಸಿದ್ದರು. ಅದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ, ನಾವು ಮುಂದಿನ ದಿನಗಳಲ್ಲಿ ಆದೇಶ ನೀಡಿದ್ದೇವೆ, ಆ ಮಾಹಿತಿ ನಮ್ಮ ಹತ್ತಿರ ಲಭ್ಯವಿಲ್ಲ ಅಂತ ಹೇಳಿ, ಇವೊತ್ತು ನಮಗೆ ಕೇಂದ್ರೀಯ ರಿಸರ್ವ್ ಬ್ಯಾಂಕ್‌ನವರು ಆ ಮಾಹಿತಿಯನ್ನು ಕೊಡಬೇಕು ಎಂದು ಹೇಳಿದರೆ, ಇದು ವಿಷಾದನೀಯ ಸಂಗತಿಯಾಗುತ್ತದೆ. ಇದರ ಜೊತೆಗೆ ತಮ್ಮ ಮೂಲಕ ಅವರನ್ನು ನಾನು ಪ್ರಶ್ನೆ ಮಾಡುವುದೇನೆಂದರೆ, 1994-95ನೇ ಸಾಲಿನಲ್ಲಿ ಸಣ್ಣ ಕೈಗಾರಿಕೆಗಳಿಗೆ ನೀಡಬೇಕಾದಂಥ ಸಹಾಯ ಧನ 68 ಕೋಟಿ 12 ಲಕ್ಷ ರೂಪಾಯಿಗಳು ಅದರಲ್ಲಿ ಈಗಾಗಲೇ ನಾವು 33.12 ಲಕ್ಷ ರೂಪಾಯಿಗಳನ್ನು ಕೊಟ್ಟಾಗಿದೆ ಎಂದು ಹೇಳಿದ್ದಾರೆ? ಯಾವ ವರ್ಷದಲ್ಲಿ ತಾವು ಈ 33.12 ಕೋಟಿ ರೂಪಾಯಿಗಳನ್ನು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸಹಾಯಧನದ ರೂಪದಲ್ಲಿ ಒದಗಿಸಿಕೊಟ್ಟಿದ್ದೀರಿ ಎನ್ನುವುದರ ಬಗ್ಗೆ ದಯಮಾಡಿ ಮಾಹಿತಿಯನ್ನು ಕೊಡಬೇಕು ಎಂದು ಕೇಳುತ್ತಿದ್ದೇನೆ.

ಶ್ರೀ ಎನ್.ಎಂ. ನಬಿ : ಮಾನ್ಯ ಸಭಾಧ್ಯಕ್ಷರೇ, ನಾನು ಅವರಿಗೆ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳನ್ನು ಗುರುತಿಸತಕ್ಕಂಥದ್ದರ ಬಗ್ಗೆ ಹೇಳಿದೆನೆ ಹೊರತು ಅದಕ್ಕೆ ನಾವು ಸಹಾಯಧನವನ್ನು ಕೊಡುತ್ತಿಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳಲಿಲ್ಲ. ಈಗಾಗಲೇ ರೋಗಗ್ರಸ್ಥವಾಗಿರತಕ್ಕಂಥ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ 50 ಸಾವಿರಕ್ಕೆ ಮೀರದ ಹಾಗೆ ಹಣ ಕೊಡುವುದಕ್ಕೆ ಮತ್ತು ಅದನ್ನು ರಿಶೆಡ್ಯೂಲ್ಡ್ ಮಾಡಿ ಕೊಡತಕ್ಕಂಥ ಪದ್ಧತಿ ಜಾರಿಯಲ್ಲಿದೆ. ಈ ಹಣ ಅವರಿಗೆ ಬಹಳ ಕಡಿಮೆಯಾಗುತ್ತದೆ ಎಂದು ನಾವು ತಿಳಿದು ಇದನ್ನು ಹೆಚ್ಚು ಮಾಡಬೇಕಾದ ಪರಿಸ್ಥಿತಿ ಇದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದ್ದು ಈಗ ಅದರ ಬಗ್ಗೆ ಒಂದು ಸಮಿತಿಯನ್ನು ಕೂಡ ಮಾಡುತ್ತಿದ್ದೇವೆ. ಈಗ ಅವರಿಗೆ ಒಂದೂವರೆ ಲಕ್ಷದವರೆಗೆ ಕೈಗಾರಿಕೆಯನ್ನು ಪುನಃಶ್ಚೇತನಗೊಳಿಸಲಿಕ್ಕೆ [illegible]ತಬೇಕು ಎಂಬುದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದೇವೆ. ಆಮೇಲೆ ಮಾನ್ಯ ಸದಸ್ಯರು ಸಹಾಯ ಧನವನ್ನು ಕೊಡುವುದರ ಬಗ್ಗೆ ಹೇಳುತ್ತಾ, 31-12-94ಕ್ಕೆ ನಮ್ಮಲ್ಲಿ, 2600 ಘಟಕಗಳು ಇದ್ದವು. 30.40 ಕೋಟಿಗಳಿತ್ತು. ಈಗ 1-1-95 ರಿಂದ 31-08-95ರ ವರೆಗೆ ನಾವು ಈಗಾಗಲೇ 26.5 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಈಗ ಸದ್ಯಕ್ಕೆ ಜೂನ್ 95 ರಿಂದ ನಮ್ಮಲ್ಲೀಗ ಇರತಕ್ಕಂಥದ್ದು 1.134 ಘಟಕಗಳಿಗೆ ನಾವು ಈಗ ಕೊಡಬೇಕಾಗಿರತಕ್ಕಂಥ ಸಹಾಯಧನ 14.31 ಕೋಟಿ ರೂಪಾಯಿಗಳು. ಅದನ್ನು ಇನ್ನು 5-6 ತಿಂಗಳಲ್ಲಿ ಪೂರ್ಣವಾಗಿ ಕೊಟ್ಟು ಅದನ್ನು ರೆಗ್ಯುಲರೈಸ್ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಆಶ್ರಯ ಯೋಜನೆಯಲ್ಲಿ ನಡೆದ ಅವ್ಯವಹಾರ

629 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಆಶ್ರಯ ಯೋಜನೆಯಲ್ಲಿ ಅವ್ಯವಹಾರದ ಬಗ್ಗೆ ಸಮಿತಿ ತನಿಖೆ ವರದಿ ನೀಡಿದ್ದು, ಈ ಬಗ್ಗೆ ಕೈಗೊಳ್ಳಲಾಗಿರುವ ಕ್ರಮಗಳಾವುವು?

ಆ) ಅವ್ಯವಹಾರದ ಬಗ್ಗೆ ಸಲ್ಲಿಸಿರುವ ವರದಿಯನ್ನು ಸರ್ಕಾರ ಅಂಗೀಕರಿಸಿದೆಯೇ;

ಇ) ಅಂಗೀಕರಿಸಿದ್ದಲ್ಲಿ ಅಪರಾಧಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡದಿರಲು ಕಾರಣಗಳೇನು?

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :